ತೆರೆಯ ಮೇಲೆ ಎಲ್ಲರನ್ನೂ ರಂಜಿಸುವ ಹಾಸ್ಯ ಕಲಾವಿದರ ಒಳಗೂ ಮನುಷ್ಯ ಸಹಜ ಹಲವಾರು ನೋವುಗಳಿರುತ್ತವೆ. ನಗುವಿನ ಟಾನಿಕ್ ಕುಡಿದು ಮತ್ತೆ ಪುಟಿದೇಳುವ ಪ್ರೇರಕ ಶಕ್ತಿಯೊಂದು ಅವರ ಜತೆಗೂ ಇದ್ದಾಗಷ್ಟೆ ಮತ್ತೆ ಮತ್ತೆ ಹೊಸತನದಿಂದ ತೆರೆಯ ಮೇಲೆ ಕಾಣಿಸಿಕೊಳ್ಳಲು ಸಾಧ್ಯ. ಈ ಬಗ್ಗೆ ಹಾಸ್ಯಕಲಾವಿದರಾದ ರಾಘವೇಂದ್ರ ಹಾಗೂ ದೀಪಿಕಾ ಮಾತನಾಡಿದ್ದಾರೆ.

# ಆರಂಭದಲ್ಲಿದ್ದ 'ಹಸಿವು' ಈಗಲೂ ಇದೆ


ರಾಘವೇಂದ್ರ

ಹಾಸ್ಯ ಕಲಾವಿದರಿಗೂ ತುಂಬಾ ದುಃಖಗಳು ಇರುತ್ತವೆ. ಜನ ಆ ದುಃಖದಲ್ಲಿರುವ ಮುಖವನ್ನು ನೋಡಿರುವುದಿಲ್ಲ ಅಷ್ಟೆ. ಪ್ರೀತಿ ತೋರಿಸುವವರು ಸದಾ ನಮ್ಮಿಂದ 'ಹಾಸ್ಯವನ್ನೇ' ನಿರೀಕ್ಷೆ ಮಾಡುತ್ತಾರೆ. ಬೇಸರದಲ್ಲಿ ಕುಳಿತಿದ್ದಾಗಲೂ 'ಯಾಕ್ ಸಾರ್ ಕಾಮಿಡಿ ಮಾಡಲ್ವ' ಅಂತಾನೇ ಕೇಳ್ತಾರೆ. ಹೀಗೆ ನಿರೀಕ್ಷೆ ಮಾಡುವುದು ಹಾಸ್ಯಕಲಾವಿದರಿಗೆ ಜನರು ತೋರಿಸುವ ಅಪಾರ ಪ್ರೀತಿಯೂ ಹೌದು. ಆದರೆ, ವೈಯಕ್ತಿಕವಾಗಿ ಕುಸಿದಾಗ, ತೀರಾ ದುಃಖದಲ್ಲಿದ್ದಾಗ ಇಂಥ ನಿರೀಕ್ಷೆಯನ್ನು ನಿಭಾಯಿಸುವುದು ಅಷ್ಟು ಸುಲಭದ ವಿಚಾರ ಆಗಿರುವುದಿಲ್ಲ. ನನಗೆ ದುಃಖವಾದಾಗೆಲ್ಲ ನಾನು ನನ್ನ ಅಪ್ಪ, ಅಮ್ಮ, ಸ್ನೇಹಿತರು ಹಾಗೂ ನನ್ನ ಏಳಿಗೆಯನ್ನು ಮೆಚ್ಚಿ ಹಾರೈಸುವವರನ್ನು ನೆನೆಸಿಕೊಳ್ಳುತ್ತೇನೆ. ಎಷ್ಟೇ ನೋವಿನಲ್ಲಿದ್ದರೂ ನನ್ನ ಮುಖದಲ್ಲಿ ಸಹಜವಾಗಿ ನಗು ಅರಳುತ್ತದೆ. ನನ್ನ ಪರವಾಗಿ ಇಷ್ಟು ಜನ ಇದ್ದಾರಲ್ಲ ಎಂಬುದು ನನ್ನೊಳಗೆ ಭದ್ರತೆಯ ಭಾವವನ್ನು ಹುಟ್ಟುಹಾಕುತ್ತದೆ. ಇಷ್ಟು ವರ್ಷಗಳ ಕಾಲ ಹೆಣ್ಣು ಪಾತ್ರವನ್ನು ನಿಭಾಯಿಸಿದ್ದೇನೆ. ನನ್ನದೇ ಸಾಮಾಜಿಕ ಜಾಲತಾಣಗಳ ಪೇಜ್‌ಗಳನ್ನು ನೋಡುವಾಗ ಎಷ್ಟೊಂದು ಮನಸ್ಸುಗಳು ಒಳ್ಳೆಯದನ್ನೇ ಹರಸಿವೆ.

ಹೊಸ ಪಾತ್ರಗಳು ಸಿಕ್ಕಿದಾಗ ನಾನು ಅದನ್ನು ಶೂನ್ಯದಿಂದಲೇ ಆರಂಭಿಸುತ್ತೇನೆ. ನಾನು ಈ ಕ್ಷೇತ್ರಕ್ಕೆ ಬಂದಾಗ ಆರಂಭದಲ್ಲಿದ್ದ ಕಲಿಯಬೇಕೆಂಬ 'ಹಸಿವು' ಈಗಲೂ ಇದೆ. ಕಲಿತುಬಿಟ್ಟಿದ್ದೇನೆ ಅಂದುಕೊಂಡರೆ ಅಲ್ಲಿಗೆ ಕಲಾವಿದನ ಕತೆ ಮುಗಿದಂತೆ. ಈಗಲೂ ನಾನು ಏನೂ ಮಾಡಿಲ್ಲ. ಇಷ್ಟು ವರ್ಷ ಏನು ಮಾಡಿದ್ದೀನಿ ಅನ್ನುವ ಪ್ರಶ್ನೆ ಬರುತ್ತದೆ. ಯಾವುದಾದರೂ ಒಂದೊಳ್ಳೆ ಪಾತ್ರವನ್ನು ಗಮನಿಸಿದಾಗ ಇನ್ನೂ ಕಲಿಯುವುದು ಸಾಕಷ್ಟಿದೆ ಎಂಬುದು ಬರುತ್ತದೆ. ಈ ಹಸಿವು ನನಗೆ ಒಂದಷ್ಟು ಒಳ್ಳೆಯ ಕಂಟೆಂಟ್ ಕೊಡಬೇಕು ಎನ್ನುವುದರ ಕಡೆಗೆ ಗಮನಹರಿಸುವಂತೆ ಮಾಡುತ್ತದೆ. ಹಾಸ್ಯ ಕಲಾವಿದನಾಗಿಯೂ, ಕಂಟೆಂಟ್ ನೀಡುವವನಾಗಿಯೂ ಈ ವಿಷಯಗಳ ಕಡೆಗೆ ಗಮನ ವಹಿಸುತ್ತೇನೆ.

'ರಾಗಿಣಿ'ಯಾಗಿಯೂ, ಉಮಾಶ್ರೀ ಅಮ್ಮನ 'ಪುಟ್ಮಲ್ಲಿ' ಪಾತ್ರವನ್ನು ಅನುಕರಣೆ ಮಾಡಿದಾಗಲೂ ಒಳ್ಳೆಯ ಹೆಸರು ಬಂದಿದೆ. ಉಮಾಶ್ರೀ ಅವರು ನನ್ನ ಪಾಲಿನ ದ್ರೋಣಾಚಾರ್ಯ. ಹಾಸ್ಯವಿರಲಿ, ಭಾವನಾತ್ಮಕ ಪಾತ್ರಗಳೇ ಇರಲಿ ಉಮಾಶ್ರೀ ಅಮ್ಮ ನನ್ನ ಪಾಲಿನ ನಿಜವಾದ ಸ್ಫೂರ್ತಿ. ಅವರನ್ನು ನಾನು ಫಾಲೊ ಮಾಡುತ್ತೇನೆ. ಸಾಮಾನ್ಯವಾಗಿ ನಾನು ದುಃಖವನ್ನು ಹಂಚಿಕೊಳ್ಳುವುದಿಲ್ಲ. ಸಣ್ಣ ಸಣ್ಣ ವಿಷಯಗಳಲ್ಲಿರುವ ಹಾಸ್ಯ ಸಂಗತಿಗಳಿಗೆ ಬಿದ್ದು ಬಿದ್ದು ನಗ್ತೀನಿ.

ನಾನು ಹೆಣ್ಣಿನ ಪಾತ್ರವನ್ನು ನಿಭಾಯಿಸುತ್ತಿರುವುದರಿಂದ ನನಗೆ ಮಹಿಳಾ ಅಭಿಮಾನಿಗಳು ಹೆಚ್ಚಿದ್ದಾರೆ. ಅವರಿಗೆ ಮುಜುಗರವಾಗದಂತೆ ಸಂಭಾಷಣೆಗಳನ್ನು ಹೇಳುವುದು ಕೂಡ ಮುಖ್ಯ. ಅಶ್ಲೀಲ ಸಂಭಾಷಣೆಗಳನ್ನು ಹೇಳುವುದು ಸುಲಭ. ಆ ಕ್ಷಣಕ್ಕೆ ನಗು ಬರಬಹುದು. ಆದರೆ, ಅದರಿಂದ ಕಲಾವಿದನಿಗೆ ದೊಡ್ಡ ಮಟ್ಟದ ನಷ್ಟವೇ ಆಗುತ್ತದೆ. ಅವನ್ನು ಹೊರತುಪಡಿಸಿ ಹಾಸ್ಯ ಹೊಸೆಯುವುದು ಬಹಳ ಮುಖ್ಯ. ಅಶ್ಲೀಲ ಸಂಭಾಷಣೆ, ಇನ್ನೊಬ್ಬ ಮನುಷ್ಯನನ್ನು ಅಪಹಾಸ್ಯ ಮಾಡಿ ನಗಿಸುವುದು ನನಗೆ ಇಷ್ಟ ಆಗದ ವಿಚಾರಗಳು. ನನ್ನ ಪ್ರಕಾರ ಈ ಎರಡೂ ಇದ್ದರೆ ಅದು ಕಾಮಿಡಿನೇ ಅಲ್ಲ. ■

# ನಿರ್ದೇಶಕರ ಹೊಗಳಿಕೆ ಮನಸ್ಸಿಗೆ ತೃಪ್ತ ಭಾವ

ನಾನು ತುಂಬಾ ಬೇಸರದಲ್ಲಿದ್ದಾಗ ನನ್ನನ್ನು ಅದರಿಂದ ಹೊರಗೆ ತರುವ ಸಂಗತಿಗಳು ನಿರ್ದಿಷ್ಟ ಅಂತ ಏನಿಲ್ಲ. ನನಗೆ ತುಂಬಾ ಬೇಸರ ಆದಾಗ ನನ್ನ ಸ್ನೇಹಿತರ ಜತೆ ತುಂಬಾ ಮಾತನಾಡುತ್ತೇನೆ. ಅದು ನನ್ನೊಳಗಿನ ಒತ್ತಡ, ಆತಂಕವನ್ನು ನಿವಾರಿಸುತ್ತದೆ. ನನ್ನ ಕುಟುಂಬ ಸದಾ ನನ್ನ ಜತೆ ಇದೆ ಎಂಬ ಭಾವವೂ ಆಗಾಗ್ಗೆ ಬೇಸರವನ್ನು ನೀಗಿಸುತ್ತದೆ. ನಾನು ಇಷ್ಟಪಡುವ ಸ್ನೇಹಿತರು ಹಾಗೂ ಕುಟುಂಬದ ಸದಸ್ಯರು ನನ್ನ ಜತೆ ಇದ್ದಾಗ ನಾನು ಖುಷಿಯಾಗಿರುತ್ತೇನೆ.

ಕಾರ್ಯಕ್ರಮಗಳನ್ನು ನೀಡುವಾಗ, ಕಲಾವಿದಳಾಗಿ ದಿನದಿಂದ ದಿನಕ್ಕೆ ಹೊಸ ಹೊಸ ಯೋಜನೆಗಳು ಸಿಗುವಾಗ ನನಗೆ ಖುಷಿಯಾಗುತ್ತದೆ. ಒಂದೊಳ್ಳೆ ಅಭಿನಯ ನೀಡಿದಾಗ ಅದನ್ನು ನಿರ್ದೇಶಕರು 'ಚೆನ್ನಾಗಿದೆ' ಅಂತ ಹೊಗಳಿದಾಗ ಮನಸ್ಸಿಗೆ ಒಂದು ಬಗೆಯ ತೃಪ್ತ ಭಾವ ಸಿಗುತ್ತದೆ. ಪ್ರಾಮಾಣಿಕವಾದ ಪ್ರೋತ್ಸಾಹವೇ ನನ್ನ ಪ್ರೇರಕ ಶಕ್ತಿ. ■


ದೀಪಿಕಾ